# ಸಾಧಕರಿಗೆ ಶ್ರೀಮಾತೆಯವರ ಉಪದೇಶಗಳು

**ಡಾ. ಇ. ವಸಂತ ಕುಮಾರ್**

ಶ್ರೀಮಾತೆ ಶಾರದಾದೇವಿಯವರು ತಮ್ಮ ಬಳಿಗೆ ಬಂದ ಭಕ್ತ-ಭಕ್ತೆಯರೊಂದಿಗೆ ಮಾತನಾಡುತ್ತಾ ನೀಡಿರುವ ಹಲವು ಉಪದೇಶಗಳು ಸಾಧಕರ ಪಾಲಿಗೆ ಅನರ್ಘ್ಯ ರತ್ನಗಳಾಗಿವೆ. ಈ ಕುರಿತು ಇಲ್ಲಿ ಬರೆದಿರುವ ಲೇಖಕರು ನಿವೃತ್ತ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಶ್ರೀಮಾತೆ ಶಾರದಾದೇವಿಯವರು ಶ್ರೀರಾಮಕೃಷ್ಣರ ಸೇವೆಯ ಜೊತೆಗೆ ತಮ್ಮ ಸಾಧನೆಯನ್ನೂ ಮಾಡುತ್ತಾ ಹನ್ನೆರಡು ವರ್ಷಗಳಿಗೂ ಹೆಚ್ಚು ಕಾಲವನ್ನು ರಾಮಕೃಷ್ಣರ ಸಂಗ-ಸಾನ್ನಿಧ್ಯಗಳಲ್ಲಿ ಕಳೆದರು. ಸ್ವಾಮಿ ವಿವೇಕಾನಂದರು ರಾಮಕೃಷ್ಣರೊಂದಿಗೆ ಕಳೆದ ಕಾಲ ನಾಲ್ಕು ವರ್ಷಗಳು. ವಿವೇಕಾನಂದರ ಬೋಧನೆಗಳು, ಅಮೆರಿಕಾ ಇಂಗ್ಲೆಂಡ್ ದೇಶಗಳಲ್ಲಿ ಐದಾರು ವರ್ಷಗಳು ಮಾಡಿದ ಉಪನ್ಯಾಸಗಳು. ಭಾರತದಲ್ಲಿ ಅವರ ಬೋಧನೆಗಳು, ಕೊಲಂಬೊ ಇಂದ ಆಲ್ಮೋರದವರೆಗೆ, ಉಪನ್ಯಾಸಗಳ ಮೂಲಕವೇ. ಶ್ರೀರಾಮಕೃಷ್ಣರ ಬೋಧನೆಯ ಕಾಲ ಕೊನೆಯ ನಾಲ್ಕು ವರ್ಷಗಳು ಮಾತ್ರ. ಉಳಿದ ಕಾಲವೆಲ್ಲಾ ಸಾಧನೆಗೆ ಮೀಸಲು. ಅವರು ಯಾವಾಗಲೂ ಒಂದಲ್ಲ ಒಂದು ಭಾವಾವಸ್ಥೆಯಲ್ಲಿ ಇರುತ್ತಿದ್ದರು. ದಕ್ಷಿಣೇಶ್ವರ ದೇವಸ್ಥಾನದ ಅವರ ಕೋಣೆಯಲ್ಲಿ, ಹಾಗೂ ಬ್ರಾಹ್ಮಭಕ್ತರ ಮತ್ತು ಇತರ ಭಕ್ತರ ಉಪಾಸನೆ, ಕೀರ್ತನೆಗಳ ಸಮಯದಲ್ಲಿ ಭಕ್ತರ ಪ್ರಶ್ನೆಗಳಿಗೆ ಉತ್ತರದಂತೆ ಮಾತನಾಡಿದುದೇ ಅವರ ಉಪದೇಶಗಳ ಸಂಗ್ರಹ, 'ರಾಮಕೃಷ್ಣ ವಚನವೇದ'. ಶ್ರೀಮಾತೆ ಶಾರದಾದೇವಿಯವರು ರಾಮಕೃಷ್ಣರ ನಂತರ ೩೪ ವರ್ಷಗಳು ಇದ್ದರು. ಅವರ ಅತ್ಯಂತ ಹಿರಿಯ ಗುಣವೇ ತಾಯ್ತನವೇ. 'ಶ್ರೀರಾಮಕೃಷ್ಣರು, ಪ್ರಪಂಚದಲ್ಲಿ ತಾಯಿಯ ಆದರ್ಶವನ್ನು ವಿಕಾಸಗೊಳಿಸಲೋಸುಗ ಈ ಬಾರಿ ನನ್ನನ್ನು ಇಲ್ಲಿಯೇ ಬಿಟ್ಟುಹೋದರು' ಎಂದು ಶಾರದಾದೇವಿಯವರು ಅವರ ಅವತಾರದ ವಿಶೇಷತೆಯ ಬಗ್ಗೆ ಹೇಳಿದ್ದಾರೆ. ರಾಮಕೃಷ್ಣರ ಮನಸ್ಸು ವ್ಯಕ್ತದ ಕೊನೆಯ ಅಂಚಿನಲ್ಲಿ, ಅವ್ಯಕ್ತದ ಹೊಸ್ತಿಲಲ್ಲಿ ನೆಲೆಸಿದ್ದು ಅವರ ವಾಣಿ ಸಕಲ ಸಾಕ್ಷಾತ್ಕಾರದ ಭೂಮಿಕೆಯಿಂದ, ಭಕ್ತಿಯ ಅಮಲಿನಿಂದ ಧುಮ್ಮಿಕ್ಕುವುದನ್ನು ನೋಡುವೆವು. ಅವರ ಅನುಭವ ಎಂತಹ ಆಧ್ಯಾತ್ಮಿಕ ಮಹಾಸಾಧಕರ ಅನುಭವಕ್ಕೂ ನಿಲುಕದುದಾಗಿತ್ತು. ಸಾಮಾನ್ಯರಿಗೆ ಅವರ ವಾಣಿ ಅತೀತವಾಗಿ, ಅವರು ಅದರಲ್ಲಿ ಕರಗಿ ಹೋಗುತ್ತಿದ್ದರು. ಸ್ವಾಮಿ ವಿವೇಕಾನಂದರ ಭೂಮಿಕೆ ಅದ್ವೈತ ವೇದಾಂತದ ಶಿಖರವಾಗಿತ್ತು. ಅಂತಹ ಉತ್ತುಂಗ ತುಂಗದಿಂದ ನೋಡುತ್ತಿದ್ದುದರಿಂದ ಅವರಿಗೆ ಎಲ್ಲವೂ ಕಾಣುತ್ತಿತ್ತು. ಊರ್ಧ್ವ ವಿಶಾಲ ವಿಹಂಗಮ ನೋಟ ಅವರದು. ಅವರು ವಿಶ್ವಾತ್ಮರಾದುದರಿಂದ ಎಲ್ಲಾ ಜೀವಿಗಳ ಚೈತನ್ಯವನ್ನೂ ಸ್ಪರ್ಶಿಸಬಲ್ಲವರಾಗಿದ್ದರು. ಅವರ ವ್ಯಕ್ತಿತ್ವದ ಮುಂದೆ ನರಮಾನವರೆಲ್ಲರೂ ಕುಬ್ಜರಾಗಿ ಕಾಣುವರು. ಔನ್ನತ್ಯದ ದೆಸೆಯಿಂದ ಅವರ ಬೋಧನೆಗಳು ಜ್ಞಾನಸೂರ್ಯನ ಪ್ರಖರತೆಯಿಂದ ಕೂಡಿವೆ.



## ಶಾರದಾದೇವಿಯವರ ಜೀವನ-ಬೋಧನೆ

ಶಾರದಾದೇವಿಯವರು ಉಪನ್ಯಾಸ ಮಾಡಲಿಲ್ಲ. ಕೀರ್ತನಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಲ್ಲ. ಅವರು ಬ್ರಹ್ಮಮಯಿ. ಆದರೂ ಅವರ ಸಮಯವೆಲ್ಲಾ ಆಗಿನ ಕಾಲದ ಸಾಮಾನ್ಯ ಗೃಹಿಣಿಯಂತೆ ಗುಡಿಸುವುದು ತೊಳೆಯುವುದು ಅಡಿಗೆ ಮಾಡುವುದು ಬಡಿಸುವುದು ಬಂದವರನ್ನು ಉಪಚರಿಸುವುದು ಕಷ್ಟದಲ್ಲಿದ್ದವರಿಗೆ ನೆರವಾಗುವುದು, ಸಂಸಾರಿಗಳ ಕಷ್ಟ ಸಂಕಟಗಳನ್ನು ಸಹಾನುಭೂತಿಯಿಂದ ಕೇಳಿಸಿಕೊಳ್ಳುವುದು. ಪಾಪಿ, ದರಿದ್ರ ದೀನ, ಆರ್ತರಿಗೆ ನೆರವು ಭರವಸೆ ಸಾಂತ್ವನ ನೀಡುವುದು, ರೋಗಿಗಳ ಆರೈಕೆ, ಅವರ ಹೊಲಸನ್ನು ತೊಳೆಯುವುದು – ಇದರಲ್ಲೇ ಕಳೆದು ಹೋಗುತ್ತಿತ್ತು. ಇಂತಹವರೊಂದಿಗೆ ಮತ್ತು ಆಧ್ಯಾತ್ಮಿಕ ಪಿಪಾಸುಗಳೊಂದಿಗೆ ಅವರು ಮಾಡಿದ ಸಂಭಾಷಣೆಯೇ ಅವರ ಬೋಧನೆ! ಇವನ್ನು ಓದಿದಾಗ, ನಮ್ಮ ತಾಯಿ ಎಲ್ಲರ ಮಧ್ಯೆ ನಮಗೆ ಊಟ ಬಡಿಸುತ್ತಾ ನಮ್ಮೊಂದಿಗೆ ಕುಳಿತು ಮಾತನಾಡುತ್ತಿರುವಂತೆ ಅನುಭವ

ವಾಗುವುದು. ನಮ್ಮ ಸಂದೇಹಗಳಿಗೆ ಅವರು ಉತ್ತರ ಕೊಡುತ್ತಿರುವಂತೆ ತೋರುವುದು. ಕಾಲಾನುಕಾಲದಿಂದ ನಮ್ಮ ಮನಸ್ಸಿನಲ್ಲಿ ಕಾಡುತ್ತಿರುವ ಗೊಂದಲಗಳಿಗೆ ಸರಳ ವಿವರಣೆಗಳಿಂದ ಅವಕ್ಕೆ ತೆರೆ ಎಳೆಯುತ್ತಿರುವುದನ್ನು ನೋಡುವೆವು. ಅವರ ಪ್ರೇಮದ ದೃಷ್ಟಿಗೆ ಸ್ತ್ರೀಯರು, ಪಾಶ್ಚಿಮಾತ್ಯ ಸ್ತ್ರೀಯರು, ವಿಧವೆಯರು, ದಾರಿಗೆಟ್ಟವರು, ದಿಕ್ಕಿಲ್ಲದವರು, ಪಾಪಿ, ಪುಣ್ಯಾತ್ಮ, ಮಹಾತ್ಮ ಪಟಿಂಗ, ಕಳ್ಳ, ಚಂಡಾಲ, ನೀಚ ಎಲ್ಲರೂ ಸಮಾನರು. ಎಲ್ಲರಿಗೂ ಅವರು ತಾಯಿ. ವಿಶ್ವಮಾತೆ. ಎಲ್ಲರೂ ಅವರ ಪ್ರೇಮವನ್ನು ಸವಿಯುತ್ತಿದ್ದರು. ಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂನ್ಯಾಸಿಗಳ ಸಮಸ್ಯೆಗಳನ್ನೂ ಅಷ್ಟೇ ಸಮರ್ಪಕವಾಗಿ ಪರಿಹರಿಸುತ್ತಿದ್ದರು. ವಿವೇಕಾನಂದರ ಸಂದೇಹವನ್ನೂ ಅಷ್ಟೇ ಸರಳವಾಗಿ ನಿವಾರಿಸುತ್ತಾ ರಾಮಕೃಷ್ಣರ ಅವತಾರದ ವೈಶಿಷ್ಟ್ಯತೆಯನ್ನು ಅವರಿಗೆ ಮನದಟ್ಟು ಮಾಡುವರು. ಅವರ ಸಂಭಾಷಣೆಗಳಲ್ಲಿ ಬರುವ ಉಪದೇಶಗಳು ಪ್ರಾಪಂಚಿಕ ಜೀವನದ ಮತ್ತು ಆಧ್ಯಾತ್ಮಿಕ ಜೀವನದ ಎಲ್ಲಾ ಅಂಗೋಪಾಂಗಗಳನ್ನೂ ಸಮಸ್ಯೆಗಳನ್ನೂ ಸ್ಪರ್ಶಿಸುತ್ತವೆ. ಅವರ ಮಾತುಗಳು ಮಂದ ಸಮೀರಣದಂತೆ ನಮ್ಮ ಮೇಲೆ ಹಾದು ನಮ್ಮ ಮನಸ್ಸನ್ನು ಒಳಹೊಕ್ಕು ಸಮಾಧಾನದಿಂದ ನಮಗೆ ತಿಳಿಯದಂತೆ ಭಗವಂತನೆಡೆಗೆ ಸಹಜವಾಗಿ ವಾತ್ಸಲ್ಯದಿಂದ ನಮ್ಮನ್ನು ಕರೆದೊಯ್ಯುವುದನ್ನು ಮುಂದೆ ಬರುವ ಕೆಲವು ಉದಾಹರಣೆಗಳಲ್ಲಿ ಕಾಣಬಹುದು.

### ಸಾಧಕರು – ಸಾಧನೆ

ಸಾಧಕರಿಗೂ ಸಾಮಾನ್ಯರಿಗೂ ವ್ಯತ್ಯಾಸವಿದೆ. ಸಾಧಕರಿಗೆ ಒಂದು ಗುರಿ ಇದೆ. ಅದರೆಡೆಗೆ ಹೋಗುವುದೊಂದೇ ಅವರ ವ್ಯಸನ. ಅವರದು ಒಮ್ಮುಖ ಯಾನ; ಗುರಿ ಸೇರಲು ಶ್ರಮಿಸುವರು. ಅದಕ್ಕೆ ಬೆಲೆ ತೆರಲು ಅವರು ಸಿದ್ಧರಾಗಿರುವರು. ಅವರಿಗೆ ಬೇಕಾದುದು ಸತ್ಯ. ಅದು ಕರೆದೆಡೆಗೆ ಅವರು ಹೋಗುವರು. ಅವರ ಜೀವನ–ಶೈಲಿ ಇಂತಹ ಸಾಹಸಕ್ಕೆ ಹೊಂದಿಕೊಂಡಿರುವುದು. ತತ್ತ್ವ–ಆದರ್ಶಗಳ ಹಂದರದ ಮೇಲೆ ಅವರ ಜೀವನ ಹಬ್ಬುವುದು. ಅವರ ಆದರ್ಶಕ್ಕೆ ಸಹಕಾರಿಯಾದುದನ್ನು ಅವರು ಸ್ವೀಕರಿಸುವರು; ಅಲ್ಲದುದನ್ನು ನಿರಾಕರಿಸುವರು. ಸತ್ಯನಿಷ್ಠೆ, ಪ್ರಾಮಾಣಿಕತೆ ಅವರಿಗೆ ಮುಂದಿನ ಉದ್ಧಾರದ ದಾರಿ ತೋರುವುವು. ಮಾರ್ಗದರ್ಶಕರಿಗಾಗಿ ಅವರು ಹಾತೊರೆಯುವರು. ಅವರು ತೋರಿದ ದಾರಿಯಲ್ಲಿ ಹೋಗಲು ಸಿದ್ಧರಾಗಿರುವರು. ಇತರ ವಿಷಯಗಳು ಅವರಿಗೆ ಗೌಣ.

ಸಾಧನೆಯ ಮುಖ್ಯ ಲಕ್ಷಣಗಳೆಂದರೆ ಅಭ್ಯಾಸ, ಪುರಶ್ಚರಣೆ, ಎಡೆಬಿಡದ ಪ್ರಯತ್ನ ಹಾಗೂ ಪ್ರಯೋಗಶೀಲತೆ. ಆಧ್ಯಾತ್ಮಿಕ ಸಾಧನೆ ಎಂದರೆ, ಅತ್ಯಂತ ಶ್ರೇಷ್ಠ ಸತ್ಯದ ಉಪಾಸನೆ. ಎಂದಿಗೂ ಬತ್ತದ ಶಾಂತಿ ಆನಂದಗಳನ್ನು ಪಡೆಯಲು ಹವಣಿಸುವುದು. ಕೇವಲ ಸಾಧನೆ ಮಾಡಿದರೆ ಸಾಲದು. ನಾವು ಸರಿಯಾದ ದಾರಿಯಲ್ಲಿ ಇರುವೆವೇ ಎಂದು ಆಗಾಗ ಪರೀಕ್ಷಿಸಿಕೊಳ್ಳಬೇಕು. ನಮಗೆ ಸಿಕ್ಕಿರುವುದು ಸರಿಯಾದುದೇ ಎಂದು ಪ್ರಮಾಣೀಕರಿಸಬೇಕು. ಅದು ಸತ್ಯಕ್ಕೆ ದೂರವಾಗಿದ್ದರೆ ಅದನ್ನು, ಎಷ್ಟೇ ಕಷ್ಟಪಟ್ಟು ಪಡೆದುಕೊಂಡಿದ್ದರೂ, ನಿರ್ದಾಕ್ಷಿಣ್ಯವಾಗಿ ಬಿಸಾಡಬೇಕು.

ಎಲ್ಲಾ ಸಾಧನೆಗಳಿಗೂ ಆವಶ್ಯಕವಾದ ಅಂಶಗಳೆಂದರೆ ಪೂರ್ವಸಿದ್ಧತೆ, ಮುಂಜಾಗರೂಕತೆ ಮತ್ತು ಪ್ರಯತ್ನದಲ್ಲಿ ವಿಶ್ವಾಸ. ಇಂತಹ ಜೀವನ ಬರಡಾಗದೆ ಹೊರೆಯಾಗದೆ ನೀರಸವಾಗದೆ ಸಾರ್ಥಕವಾಗಿ ಗುರಿ ಸೇರಬೇಕಾದರೆ ಧ್ಯಾನ ಮತ್ತು ಪ್ರಾರ್ಥನೆ ಆವಶ್ಯಕ. ಈ ಅಂಶ ಶ್ರೀಮಾತೆಯವರ ಬೋಧನೆಗಳಲ್ಲಿ ಹಾಸುಹೊಕ್ಕಾಗಿದೆ. ಅವರ ಉಪದೇಶಗಳು ಎಲ್ಲಾ ವರ್ಗದ ಸಾಧಕರಿಗೂ ಸಾಧನೆಯ ಎಲ್ಲಾ ಹಂತಗಳಲ್ಲಿಯೂ ದಾರಿ ಬೆಳಕಾಗುತ್ತವೆ; ಸಾಧಕರಿಗಷ್ಟೇ ಅಲ್ಲದೆ ಇತರರಿಗೂ ಸಾಧನೆಗೆ ಪ್ರೇರಕವಾಗಿ ಸ್ಫೂರ್ತಿದಾಯಕವಾಗಿರುವುದನ್ನು ನೋಡಬಹುದು.

### ಬೋಧನೆ ಮತ್ತು ಉಪದೇಶ

ಪ್ರಪಂಚದಲ್ಲಿ ಬಂದು ಹೋದ ಆಚಾರ್ಯರೆಲ್ಲರೂ ಬೋಧನೆ ಮಾಡಿರುವರು, ಉಪದೇಶಗಳನ್ನು ಕೊಟ್ಟಿರುವರು. ಅವರ ಸಂದೇಶಗಳನ್ನು ಬಿಟ್ಟುಹೋಗಿರುವರು. ಅವರ ಬೋಧನೆಗಳು ಅವರ ಜೀವನದಿಂದ, ಅನುಷ್ಠಾನದ ಮೂಲಕ ಬಂದಿರುವುದರಿಂದ ಅವಕ್ಕೆ ಬೆಲೆ ಇದೆ. ಸಾಮಾನ್ಯವಾಗಿ ಬೋಧನೆ ಎಂದರೆ ತತ್ತ್ವ– ಆದರ್ಶಗಳ ಮಂಡನೆ, ವಿವರಣೆ. ಅವನ್ನು ಅಭ್ಯಸಿಸುವವರಿಗೆ ಉಪಯುಕ್ತವಾದ ಸಲಹೆಗಳನ್ನು ಕೊಡುವುದು ಮತ್ತು ಅಭ್ಯಾಸ ಕಾಲದಲ್ಲಿ ತಲೆದೋರುವ ಸಂದೇಹಗಳನ್ನು ನಿವಾರಿಸುವುದು. ಉಪದೇಶವೆಂದರೆ ಹತ್ತಿರದಲ್ಲಿ ಕುಳಿತು ನಮ್ಮ ಶ್ರೇಯಸ್ಸಿಗಾಗಿ ಗುರುಗಳು ಹೇಳುವ ಕಿವಿಮಾತು, ವಿಧಿ–ವಿಧಾನಗಳು. ವಿಧಿ–ನಿಷೇಧಗಳು. ಇವು ಆದೇಶವೂ ಹೌದು. ಉಪದೇಶಗಳನ್ನು ಕೊಡುವರು, ಪ್ರದಾನ ಮಾಡುವರು. ಬೇಕಾದವರು ಅದಕ್ಕಾಗಿ ಪ್ರಾರ್ಥಿಸಿಕೊಳ್ಳಬಹುದು ಅಥವಾ ಅಯಾಚಿತವಾಗಿ ಅವರಿಗೆ ದೊರೆಯಬಹುದು. ಅದು ಪಡೆದವರ ಅಂತಃಕರಣವನ್ನು ಪ್ರವೇಶಿಸಿ ಅವರ ಉದ್ಧಾರಕ ಶಕ್ತಿಯಾಗಿ ಅಲ್ಲಿಯೇ ನೆಲೆಸುವುದು. ಅದೊಂದು ಸೂಕ್ಷ್ಮ ಶಕ್ತಿ, ಬಾಹ್ಯವಸ್ತುವಿನಂತೆ ಅದನ್ನು ಹಿಂದಕ್ಕೆ ಪಡೆಯಲಾಗದು ಅಥವಾ ಹಿಂತಿರುಗಿಸಲಾಗದು. ಉಪದೇಶ ಗುರುವಿನ ಜ್ಞಾನ, ಅನುಭವ, ಅಧಿಕಾರ, ಸಾಕ್ಷಾತ್ಕಾರದಿಂದ ಬಂದವು. ಅವನ್ನು ಅನುಷ್ಠಾನದಿಂದ, ಶಾಸ್ತ್ರಾಧಾರದಿಂದ ಪರಿಶೀಲಿಸಬಹುದೇ ಹೊರತು, ಪ್ರಶ್ನಿಸುವಂತಿಲ್ಲ, ಸಂದೇಹಿಸುವಂತಿಲ್ಲ. ಕೇವಲ ಅನುಸರಿಸಬೇಕು. ಅನುಷ್ಠಾನಕ್ಕೆ ತರಬೇಕು. ಇದರಿಂದ ಚ್ಯುತರಾದರೆ ಗುರುವಿಗೇನೂ ಹಾನಿಯಿಲ್ಲ, ನಷ್ಟ ಅನುಭವಿಸುವವರು ನಾವೇ, ಭ್ರಷ್ಟರಾಗುವವರು ನಾವೇ.

### ಕರ್ಮ, ನಿತ್ಯಜೀವನ – ನಮ್ಮ ದೃಷ್ಟಿಕೋನ

ನಮಗೆಲ್ಲಾ ಪ್ರಪಂಚ ಒಂದು ಒಗಟಿನಂತಿದೆ. ಅದರ ರೀತಿ–ನೀತಿಗಳನ್ನು ಅರ್ಥ ಮಾಡಿಕೊಳ್ಳಲಾರದೆ ನಮ್ಮ ಮನಸ್ಸು, ಬುದ್ಧಿ ಗೋಜಲಾಗುವುವು. ಇದನ್ನು ಶ್ರೀಮಾತೆಯವರು ನಮಗೆ ಸರಳಗೊಳಿಸಿರುವರು.

ಪ್ರಪಂಚ ಭಗವಂತನದು. ಅವನ ಲೀಲೆಗೋಸ್ಕರ ಇದನ್ನು ಸೃಷ್ಟಿಸಿರುವನು. ನಾವು ಕೇವಲ ಅವನ ಆಟಿಕೆಗಳು. ಅವನು ನಮ್ಮನ್ನು ಎಲ್ಲಿ ಇಟ್ಟಿರುತ್ತಾನೆಯೊ ಹೇಗೆ ಇಟ್ಟಿರುತ್ತಾನೆಯೊ ಅದರಂತೆ ನಾವು ತೃಪ್ತರಾಗಿ ನಡೆದುಕೊಳ್ಳಬೇಕು. ನಮ್ಮ ಕರ್ಮಗಳಿಂದಾಗಿಯೇ ನಾವು ಕಷ್ಟಪಡುವುದು. ಅದಕ್ಕೆ ಇತರರನ್ನು ದೂರುವುದು ನ್ಯಾಯವಲ್ಲ. ನಾವು ಭಗವಂತನಿಗೆ ಶ್ರದ್ಧಾಭಕ್ತಿಗಳಿಂದ ಸಂಪೂರ್ಣವಾಗಿ ಶರಣಾಗಬೇಕು. ನಮಗೆ ಸಾಧ್ಯವಾದಷ್ಟು ಇತರರಿಗೆ ಸೇವೆ ಮಾಡಬೇಕು ಮತ್ತು ಎಂದಿಗೂ ಮತ್ತೊಬ್ಬರ ದುಃಖಕ್ಕೆ ಕಾರಣರಾಗಬಾರದು.

ನಮಗಿರುವ ಅಲ್ಪ ತಿಳಿವಳಿಕೆಯಿಂದ ಪ್ರಪಂಚದ ಡೊಂಕನ್ನು ಸರಿಮಾಡಲು ಹೊರಡುವೆವು. ಇತರರ ಅಡ್ಡಿಯಿಂದ ನಮಗೆ ಅವಕಾಶಗಳು ಕೈತಪ್ಪಿಹೋದುವು ಎಂದು ಗೊಣಗಾಡುವೆವು. ಯಾವುದಕ್ಕೆ ನಾವು ತರಪೇತನ್ನು ತೆಗೆದುಕೊಂಡಿರುವೆವೊ, ಯಾವುದು ನಮ್ಮ ಸಂಸ್ಕಾರಕ್ಕೆ ಅನುಗುಣವಾಗಿರುವುದೊ ಅದನ್ನು ಬಿಟ್ಟು ಇತರ ಕೆಲಸಗಳನ್ನು ಮಾಡಲು ಮುಂದಾಗುವೆವು. ನಮ್ಮ ಅಶಾಂತಿಯ ಮೂಲವನ್ನು ಮಾತೆ ನಮಗೆ ತೋರಿಸಿರುವರು.

ದೇವರಿರುವುದಾದರೆ, ಈ ಪ್ರಪಂಚದಲ್ಲಿ ಏಕೆ ಇಷ್ಟೊಂದು ಸಮಸ್ಯೆಗಳಿವೆ? ಅವನಿಗದು ಕಾಣದೆ? ಅಥವಾ, ಈ ಕೆಟ್ಟದ್ದನ್ನೆಲ್ಲಾ ತೊಡೆದುಹಾಕಲು ಅವನಿಗೆ ಸಾಮರ್ಥ್ಯವಿಲ್ಲವೆ? ಎಂಬ, ನಮ್ಮನ್ನು ಆಗಾಗ ಕಾಡುವ ಪ್ರಶ್ನೆಗೆ ಮಾತೆಯ ಉತ್ತರ:

ಸೃಷ್ಟಿಯೇ ದುಃಖದಿಂದ ತುಂಬಿದೆ. ದುಃಖವಿಲ್ಲದಿದ್ದರೆ ಸಂತೋಷವನ್ನು ಅರ್ಥ ಮಾಡಿಕೊಳ್ಳಲು ಹೇಗೆ ಸಾಧ್ಯ? ಮತ್ತೆ, ಎಲ್ಲರೂ ಏಕಕಾಲದಲ್ಲಿ ಸಂತೋಷವಾಗಿರಲು ಹೇಗೆ ಸಾಧ್ಯ? ಯಾರೂ ಇಡಿ ಜೀವನವನ್ನು ಕಷ್ಟದಲ್ಲಿ ಕಳೆಯುವುದಿಲ್ಲ. ಪ್ರತಿಯೊಂದು ಕರ್ಮವೂ ಅದರದೇ ಆದ ಫಲವನ್ನು ತರುತ್ತದೆ. ಅದರಂತೆ ಅವಕಾಶಗಳು ಅವರಿಗೆ ದೊರೆಯುತ್ತವೆ.

ಹಾಗಾದರೆ ಪ್ರತಿಯೊಂದೂ ಕರ್ಮದ ಫಲವೆ? ಎಂದು ಪ್ರಶ್ನಿಸಲಾಗಿ, ಕರ್ಮವಲ್ಲದೆ ಮತ್ತೇನು? ಎಂದರು.

ಒಬ್ಬನು ಕರ್ಮ ಮಾಡಲೇಬೇಕು. ಕರ್ಮದ ಮೂಲಕ ಮಾತ್ರವೇ ಒಬ್ಬ ಕರ್ಮಬಂಧನದಿಂದ ಪಾರಾಗಬಲ್ಲ; ಆಗ ಮಾತ್ರವೇ ಅವನು ಆಸೆಗಳಿಂದ ಮುಕ್ತನಾಗುವನು. ಕರ್ಮದಿಂದ ಅನಾಸಕ್ತಿಯನ್ನು ಪಡೆಯುವನು. ಒಂದು ಕ್ಷಣವಾದರೂ ಕೆಲಸವಿಲ್ಲದೆ ಸುಮ್ಮನೆ ಇರಬೇಡಿ.

ನಿಸ್ಸಂದೇಹವಾಗಿಯೂ ನೀನು ಕರ್ಮದಲ್ಲಿ ನಿರತನಾಗಿರಬೇಕು. ಕರ್ಮ ಮನಸ್ಸಿನ ಚಂಚಲತೆಯನ್ನು ತಗ್ಗಿಸುವುದು. ಅದರ ಜತೆಗೆ ಪ್ರಾರ್ಥನೆ ಮತ್ತು ಧ್ಯಾನ ಆವಶ್ಯಕ.

ಅಪಾಯ ಮತ್ತು ಕಷ್ಟ ಬರುವುದಿಲ್ಲವೆಂದು ತಿಳಿಯುವುದು ಮೂರ್ಖತನ. ಅವು ಬಂದೇ ಬರುವುವು. ಆದರೆ ಅವು ಭಕ್ತನ ಕಾಲಿನ ಕೆಳಗೆ ನೀರು ಹರಿದುಹೋಗುವಂತೆ ಹೊರಟು ಹೋಗುವುವು.

ಒಬ್ಬ ತನ್ನ ಹಿಂದಿನ ಕರ್ಮದ ಪರಿಣಾಮದಿಂದ ತಪ್ಪಿಸಿಕೊಳ್ಳಲಾರ. ಆದರೆ ಭಕ್ತಿಯಿಂದ ಬಾಳಿದರೆ, ಕಾಲೇ ಕತ್ತರಿಸಿ ಹೋಗುವಂತಿದ್ದರೆ ಒಂದು ಸಣ್ಣ ಮುಳ್ಳಿನ ನೋವಿನಿಂದ ಮಾತ್ರ ಪಾರಾಗುವನು.

ಸಂದರ್ಭವಶಾತ್ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವವರು ಇರುವರು. ಆದರೆ ಅವರ ಪ್ರತಿಯೊಂದು ಕರ್ತವ್ಯದ ಸಣ್ಣ ಸಣ್ಣ ವಿವರಗಳಲ್ಲಿಯೂ ಅವರು ತೋರುವ ಆಸಕ್ತಿಯಿಂದ ಅವರನ್ನು ಸರಿಯಾಗಿ ತಿಳಿದುಕೊಳ್ಳಬಹುದು.

### ವ್ಯರ್ಥ ಮಾಡದಿರಿ!

ಭಕ್ತನೊಬ್ಬ ನೈವೇದ್ಯಕ್ಕೆಂದು ಒಂದು ಬುಟ್ಟಿಯಲ್ಲಿ ಹಣ್ಣುಗಳನ್ನು 'ಉದ್ಬೋಧನ'ಕ್ಕೆ ತಂದನು. ನಂತರ ಖಾಲಿ ಬುಟ್ಟಿಯನ್ನು ಏನು ಮಾಡುವುದೆಂದು ಅಲ್ಲಿನ ಸ್ವಾಮಿಗಳನ್ನು ಕೇಳಿದನು. ಅವರು ಅದನ್ನು ಗಲ್ಲಿಯಲ್ಲಿ ಬಿಸಾಡುವಂತೆ ಹೇಳಿದರು. ಅದನ್ನು ಗಮನಿಸಿದ ಶ್ರೀಮಾತೆಯವರು, ''ನೋಡಲ್ಲಿ, ಅಷ್ಟು ಚೆನ್ನಾದ ಬುಟ್ಟಿಯನ್ನು ಬಿಸಾಡಲು ಅವನಿಗೆ ಹೇಳಿರುವರು! ಅವರಿಗೆ ಅದರ ಬಗ್ಗೆ ಏನೂ ಅನ್ನಿಸುವುದೇ ಇಲ್ಲ. ಅವರೆಲ್ಲಾ ಸಂನ್ಯಾಸಿಗಳು. ಯಾವುದಕ್ಕೂ ಅಂಟಿಕೊಂಡಿಲ್ಲ. ಆದರೆ ನಾವು ಹಾಗೆ ವ್ಯರ್ಥ ಮಾಡುವುದಕ್ಕಾಗುವುದಿಲ್ಲ. ಅದನ್ನು ತರಕಾರಿಯ ಸಿಪ್ಪೆಯನ್ನು ಹಾಕುವುದಕ್ಕಾದರೂ ಉಪಯೋಗಿಸಿಕೊಳ್ಳಬಹುದಿತ್ತು'' ಎಂದರು. ಆ ಬುಟ್ಟಿಯನ್ನು ತಂದು ತೊಳೆದಿಡುವಂತೆ ಯಾರಿಗೋ ಹೇಳಿದರು. ನಂತರ ಅದನ್ನು ಉಪಯೋಗಕ್ಕೆ ಇಡಲಾಯಿತು.

### ಪೊರಕೆಯ ಮೇಲೂ ಗೌರವವಿರಲಿ!

ಒಬ್ಬರು ಕಸ ಗುಡಿಸಿದ ಮೇಲೆ ಪೊರಕೆಯನ್ನು ಒಂದು ಮೂಲೆಗೆ ಎಸೆದರು. ಆಗ ಶ್ರೀಮಾತೆ ಹೇಳಿದರು: ''ಏನು ವಿಚಿತ್ರ, ಮಗು! ಕೆಲಸವಾಯಿತು, ಅದನ್ನು ನೀನು ನಿರ್ಲಕ್ಷ್ಯದಿಂದ ಎಸೆಯುವೆ. ಎಸೆಯುವುದಕ್ಕೆ ಎಷ್ಟು ಸಮಯ ಬೇಕೊ, ಅದನ್ನು ನಿಧಾನವಾಗಿ ಜೋಪಾನವಾಗಿ ಇಡುವುದಕ್ಕೂ ಅಷ್ಟೇ ಸಮಯ ಸಾಕು. ಅದು ನಿಕೃಷ್ಟ ವಸ್ತುವೆಂದು ಅದನ್ನು ತಿರಸ್ಕಾರದಿಂದ ಕಾಣುವುದೆ? 'ಯಾವುದನ್ನು ರಕ್ಷಿಸುತ್ತೀಯೊ ಅದು ನಿನ್ನನ್ನು ರಕ್ಷಿಸುವುದು.' ಅದು ನಿನಗೆ ಮತ್ತೊಮ್ಮೆ ಬೇಡವೆ? ಅಲ್ಲದೆ, ಅದೂ ನಮ್ಮ ಮನೆಗೆ ಸೇರಿದುದಲ್ಲವೆ? ಆ ದೃಷ್ಟಿಯಿಂದಲಾದರೂ ಅದು ನಮ್ಮ ಗಣನೆಗೆ ಯೋಗ್ಯ. ಪ್ರತಿಯೊಂದಕ್ಕೂ ಅದಕ್ಕೇ ಆದ ಮರ್ಯಾದೆಯನ್ನು ನೀನು ಕೊಡಬೇಕು. ಪೊರಕೆಗೂ ಸ್ವಲ್ಪ ಗೌರವವನ್ನು ಕೊಡಬೇಕು. ಅತ್ಯಂತ ಕನಿಷ್ಠ ಕೆಲಸವನ್ನೂ ಶ್ರದ್ಧೆಯಿಂದ ಮಾಡಬೇಕು.''

### ದುಃಖ

ದುಃಖತಾಡಿತ ಹೃದಯವನ್ನು ಭಗವಂತನಿಗೆ ತೆರೆದಿಡು. ಜನರು ತಮ್ಮ ದುಃಖ ಸಂಕಟಗಳ ಗೋಳನ್ನು ಹೇಳಿಕೊಳ್ಳುತ್ತಾ ಎಷ್ಟೇ ಪ್ರಾರ್ಥಿಸಿದರೂ ತಮ್ಮ ದುಃಖದಿಂದ ಪಾರಾಗಲಿಲ್ಲವೆಂದು ದೂರುತ್ತಾರೆ. ಆದರೆ ದುಃಖವೇ ದೇವರ ಒಂದು ವರ. ಅದು ಅವನ ದಯೆಯ ಚಿಹ್ನೆ. ದುಃಖವನ್ನು ಅನುಭವಿಸದವರು

ಯಾರಾದರೂ ಈ ಪ್ರಪಂಚದಲ್ಲಿ ಇದ್ದಾರೆಯೆ? ಒಮ್ಮೆ ವೃಂದೆ ಕೃಷ್ಣನಿಗೆ ಹೇಳಿದಳು. 'ನೀನು ದಯಾಮಯನೆಂದು ಯಾರು ಹೇಳಿದರು? ರಾಮನಾಗಿ ಸೀತೆಯ ಜೀವನವನ್ನು ದುಃಖಮಯವಾಗಿ ಮಾಡಿದೆ; ಕೃಷ್ಣನಾಗಿ ರಾಧೆಯ ಜೀವನವನ್ನು ದುಃಖಮಯ ಮಾಡಿದೆ. ಕಂಸನ ಕಾರಾಗೃಹದಲ್ಲಿ ನಿನ್ನ ತಂದೆತಾಯಿಗಳು ನಿನಗಾಗಿ ಹಗಲು ರಾತ್ರಿ ಅಳುವಂತೆ ಮಾಡಿದೆ. ಆದರೂ ನಾವು ನಿನ್ನನ್ನು ಕರೆಯುತ್ತೇವೆ, ಏಕೆಂದರೆ, ಯಾರು ನಿನ್ನ ಹೆಸರನ್ನು ಜಪಿಸುತ್ತಾರೆಯೊ ಅವರಿಗೆ ಮರಣಭಯವಿಲ್ಲ.'

### ಮನಸ್ಸು

ಮನಸ್ಸು ಕಾಡಾನೆಯಂತೆ. ತನ್ನ ಇಚ್ಛೆ ಬಂದೆಡೆ ಹೋಗುವುದು. ಆದಕಾರಣ ಒಬ್ಬನು ಯಾವಾಗಲೂ ಒಳ್ಳೆಯದು-ಕೆಟ್ಟದ್ದನ್ನು ಕುರಿತು ವಿಮರ್ಶಿಸಬೇಕು, ಭಗವಂತನನ್ನು ಪಡೆಯುವುದಕ್ಕೆ ಪ್ರಯತ್ನಪಡಬೇಕು. ಚಂದ್ರ ಹೇಗೆ ಹೆಚ್ಚು ಕಡಿಮೆಯಾಗುವನೊ ಹಾಗೆಯೇ ಮನಸ್ಸಿಗೂ ಕೂಡ ಹೆಚ್ಚು ಕಡಿಮೆಯಾಗುವ ಸ್ವಭಾವವಿರುವುದು. ಮನಸ್ಸು ಸಹಜವಾಗಿ ಕೆಟ್ಟ ಕಾರ್ಯಗಳ ಕಡೆ ಹೋಗುತ್ತದೆ. ಒಳ್ಳೆಯದನ್ನು ಮಾಡುವುದರಲ್ಲಿ ಅದಕ್ಕೆ ಆಲಸ್ಯ. ಮನಸ್ಸು ದೇವರ ಹೊರತಾಗಿ ಮತ್ತೆ ಯಾವುದರ ಕಡೆ ಹೋದರೂ ಅದು ಅಶಾಶ್ವತವೆಂದು ತಿಳಿ. ಮನಸ್ಸನ್ನು ಭಗವಂತನ ಪವಿತ್ರ ಪಾದಗಳಿಗೆ ಅರ್ಪಿಸು. ಕಣ್ಣು ಕಿವಿಗಳಂತೆ ಮನಸ್ಸಿನ ಸ್ವಭಾವವೂ ಚಂಚಲ. ತಪ್ಪದೆ ಸಾಧನೆ ಮಾಡು. ದೇವರ ಹೆಸರು ಇಂದ್ರಿಯಗಳಿಗಿಂತ ಶಕ್ತಿಯುತವಾದುದು.

**ಶಿಷ್ಯ:** ಮನಸ್ಸು ಏಕೆ ಸ್ಥಿರವಾಗಿರುವುದಿಲ್ಲ? ದೇವರನ್ನು ಕುರಿತು ಚಿಂತಿಸತೊಡಗಿದಾಗ ಅದು ಇತರ ವಸ್ತುಗಳೆಡೆಗೆ ಎಳೆಯಲ್ಪಡುತ್ತದೆ?

**ಮಾತೆ:** ಮನಸ್ಸು ಪ್ರಾಪಂಚಿಕ ವಸ್ತುಗಳ ಕಡೆ ಹೋದರೆ ಅದು ತಪ್ಪು. ಪ್ರಾಪಂಚಿಕ ವಸ್ತುಗಳೆಂದರೆ, ಹಣ, ಸಂಸಾರ ಇತ್ಯಾದಿ. ಆದರೆ, ನಾವು ತೊಡಗಿರುವ ಕೆಲಸಗಳ ಆಲೋಚನೆ ಬಂದರೆ ಅದು ಸಹಜ. ಧ್ಯಾನ ಸಾಧ್ಯವಾಗದಿದ್ದರೆ ಜಪ ಮಾಡು. ಜಪದ ಮೂಲಕ ಸಾಕ್ಷಾತ್ಕಾರ ಉಂಟಾಗುತ್ತದೆ. ಧ್ಯಾನಾವಸ್ಥೆ ಬಂದರೆ ಬಹಳ ಸಂತೋಷ, ಆದರೆ ಎಂದಿಗೂ ಅದನ್ನು ಬಲಾತ್ಕಾರದಿಂದ ಮಾಡಬೇಡ.

ಮನಸ್ಸು ಸಹಜವಾಗಿ ಚಂಚಲ. ಆದ್ದರಿಂದ ಪ್ರಾರಂಭದಲ್ಲಿ ಅದನ್ನು ಸ್ಥಿರಗೊಳಿಸಲು ಉಸಿರಾಟವನ್ನು ಸ್ವಲ್ಪ ನಿಯಂತ್ರಿಸಿ ಧ್ಯಾನವನ್ನು ಅಭ್ಯಾಸ ಮಾಡಬೇಕಾಗುತ್ತದೆ. ಅದು ಮನಸ್ಸನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ. ಆದರೆ ಅದನ್ನು ಅತಿಯಾಗಿ ಮಾಡಬಾರದು. ಅದು ಮೆದುಳನ್ನು ಬಿಸಿ ಮಾಡುತ್ತದೆ. ನೀನು ಭಗವದ್ದರ್ಶನ ಅಥವಾ ಧ್ಯಾನದ ಬಗ್ಗೆ ಮಾತನಾಡಬಹುದು. ಆದರೆ, ನೆನಪಿರಲಿ. ಮನಸ್ಸೇ ಎಲ್ಲವೂ. ಮನಸ್ಸು ಸ್ಥಿರವಾದಾಗ ಎಲ್ಲವೂ ದೊರೆಯುತ್ತದೆ. ಮನಸ್ಸು ತನ್ನಷ್ಟಕ್ಕೆ ತಾನೆ ಸ್ತಬ್ಧವಾದರೆ, ಪ್ರಾಣಾಯಾಮವೇಕೆ ಬೇಕು?

### ಧ್ಯಾನ - ಜಪ - ಪ್ರಾರ್ಥನೆ

ಕೆಲಸದಲ್ಲಿ ತೊಡಗಿದಾಗ ಮನಸ್ಸು ಸರಿಯಾಗಿರುತ್ತದೆ. ಆದರೂ ಜಪ, ಧ್ಯಾನ ಪ್ರಾರ್ಥನೆಯೂ ವಿಶೇಷವಾಗಿ ಬೇಕು. ಬೆಳಗ್ಗೆ ಮತ್ತು ಸಂಜೆ ಒಮ್ಮೆಯಾದರೂ ಧ್ಯಾನಕ್ಕೆ ಕುಳಿತುಕೊಳ್ಳಬೇಕು. ಅದು ದೋಣಿಗೆ ಇರುವ ಚುಕ್ಕಾಣಿಯಂತೆ. ಸಂಜೆ ಧ್ಯಾನಕ್ಕೆ ಕುಳಿತಾಗ ಇಡೀ ದಿನ ನೀನು ಮಾಡಿದ – ಒಳ್ಳೆಯದು ಮತ್ತು ಕೆಟ್ಟದ್ದು – ಎಲ್ಲ ವನ್ನೂ ಆಲೋಚಿಸಲು ಒಂದು ಅವಕಾಶ ದೊರೆತಂತಾಗುತ್ತದೆ. ನಂತರ, ಹಿಂದಿನ ದಿನದ ಮತ್ತು ಇಂದಿನ ನಮ್ಮ ಮನಸ್ಸಿನ ಸ್ಥಿತಿಯನ್ನು ಹೋಲಿಸಿ ನೋಡಿಕೊಳ್ಳಬೇಕು. ಕೆಲಸದ ಜತೆಗೆ ಬೆಳಗ್ಗೆ ಮತ್ತು ಸಂಜೆ ಧ್ಯಾನ ಮಾಡದಿದ್ದರೆ, ನೀನು ವಾಸ್ತವವಾಗಿ ಏನು ಮಾಡುತ್ತಿರುವೆ ಎಂಬುದು ನಿನಗೆ ಹೇಗೆ ಗೊತ್ತಾಗ ಬೇಕು?

ಜಪ ಇಂತಹ ಸಮಯದಲ್ಲೇ ಮಾಡಬೇಕೆಂಬ ನಿಯಮವೇನೂ ಇಲ್ಲವೆಂಬುದು ನಿಜ. ಆದರೂ ಬೆಳಗ್ಗೆ ಮತ್ತು ಸಂಜೆ ಕ್ಲುಪ್ತವಾದ ಕಾಲಗಳು. ಸಮಯ ಯಾವುದೇ ಆಗಿರಲಿ, ನೀನು ಜಪವನ್ನು ಪ್ರತಿನಿತ್ಯ ಮಾಡಬೇಕು. ಒಂದು ದಿನವೂ ಅದನ್ನು ಮಾಡದಿರುವುದು ಒಳ್ಳೆಯದಲ್ಲ. ಹಗಲು ಮತ್ತು ರಾತ್ರಿ ಸೇರುವ ಸಂಧಿಕಾಲ ಭಗವಂತನನ್ನು ಕರೆಯುವುದಕ್ಕೆ ಅತ್ಯಂತ ಪ್ರಶಸ್ತ ಕಾಲ. ಆ ಸಮಯದಲ್ಲಿ ಮನಸ್ಸು ಶುದ್ಧವಾಗಿರುತ್ತದೆ. ಧ್ಯಾನ, ಜಪಕ್ಕೆ ಒಂದು ನಿಗದಿತವಾದ ಸಮಯ ಆವಶ್ಯಕ. ಏಕೆಂದರೆ ಪ್ರಶಸ್ತವಾದಗಳಿಗೆ ಯಾವಾಗ ಬರುವುದೊ ಹೇಳಲಾಗದು. ಇದ್ದಕ್ಕಿದ್ದಂತೆ ಯಾವ ಮುನ್ಸೂಚನೆಯೂ ಇಲ್ಲದೆ ಅದು ಬರುತ್ತದೆ.

ಧ್ಯಾನವನ್ನು ಅಭ್ಯಾಸ ಮಾಡಿ. ಕ್ರಮೇಣ ನಿಮ್ಮ ಮನಸ್ಸು ಶಾಂತವಾಗಿ ಏಕಾಗ್ರವಾಗುವುದು. ಆಗ ಧ್ಯಾನ ಮಾಡದೆ ಇರವುದಕ್ಕೇ ನಿಮಗೆ ಆಗುವುದಿಲ್ಲ. ಗಾಳಿ ಮೋಡವನ್ನು ಚದುರಿಸುವಂತೆ ಭಗವಂತನ ಹೆಸರು ಪ್ರಾಪಂಚಿಕತೆಯ ಮೋಡವನ್ನು ಓಡಿಸುವುದು.

ಜಪ ಮತ್ತು ಇತರ ಆಧ್ಯಾತ್ಮಿಕ ಸಾಧನೆಗಳ ಪ್ರಾಮುಖ್ಯತೆ ನಿನಗೆ ಗೊತ್ತಿದೆಯೆ? ಇದರಿಂದ ವಿಷಯೇಂದ್ರಿಯಗಳ ಬಲ ಕುಂದುತ್ತದೆ. ಯಾರು ಪ್ರಾರ್ಥನೆಯ ಅಭ್ಯಾಸವನ್ನು ಮಾಡಿಕೊಂಡಿರುವರೊ ಅವರು ಎಲ್ಲಾ ಕಷ್ಟಗಳನ್ನೂ ಸುಲಭವಾಗಿ ದಾಟುತ್ತಾರೆ, ಜೀವನದಲ್ಲಿ ಪರೀಕ್ಷಾಸಮಯ ಬಂದಾಗ ಶಾಂತರಾಗಿ ಅಬಾಧಿತರಾಗಿರುತ್ತಾರೆ. ಮಂತ್ರ ದೇಹವನ್ನು ಶುದ್ಧಿಗೊಳಿಸುವುದು. ದೇವರ ಮಂತ್ರವನ್ನು ಜಪಿಸುತ್ತಾ ಮಾನವ ಪವಿತ್ರನಾಗುವನು.

### ಉಪಸಂಹಾರ

ಯಾರ ಮನಸ್ಸು ಶ್ರೀಮಾತೆಯವರ ಮಾತುಗಳಿಗೆ ತೆರೆಯುತ್ತದೆಯೊ ಅಲ್ಲಿ ಚಂದ್ರಮನ ಶೀತಲ ಕಾಂತಿಯಂತೆ ಅವು ಬೆಳಕನ್ನು ಚೆಲ್ಲುತ್ತಾ ಅವರ ಹೃದಯದಲ್ಲಿ ಶಾಂತಿ ಸಮಾಧಾನಗಳೊಂದಿಗೆ ಭಕ್ತಿ ಯನ್ನು ಸ್ಫುರಿಸುತ್ತವೆ. ಅವರ ಉಪದೇಶಗಳ ನಂದಾದೀವಿಗೆ ಅವರ ಮನದಲ್ಲಿ ಸದಾ ಬೆಳಗುತ್ತಾ ಭವಸಾಗರವನ್ನು ದಾಟಿಸುವ ಶಕ್ತಿಯಾಗುತ್ತದೆ. ✽